MARCH 24, 2026

# AKASHAVANI - DHARWAD

## PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ವಿಧಾನಸೌಧದ ಪಶ್ಚಿಮ ದ್ವಾರ, 84 ಲಕ್ಷ ರೂಪಾಯಿ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿದೆ. ಕುಸರಿ ಕೆತ್ತನೆಯ, ಬೀಟೆ ಮರದ ಬಾಗಿಲು, ಮೈಸೂರು ಅರಮನೆಯ ಬಾಗಿಲುಗಳ ಮಾದರಿಯಲ್ಲಿ ರೂಪಿತವಾಗಿದೆ. ದ್ವಾರದ ಮೇಲ್ಭಾಗದಲ್ಲಿ, ರಾಜ್ಯ ಲಾಂಛನ ಗಂಡಭೇರುಂಡ ಹಾಗೂ ರಾಷ್ಟ್ರ ಲಾಂಛನ, ಅಶೋಕ ಸ್ತಂಭದ ಕಲಾಕೃತಿಗಳನ್ನು ಅಳವಡಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಬೆಳಗ್ಗೆ ನವೀಕೃತ ದ್ವಾರವನ್ನು ಉದ್ಘಾಟಿಸಿದರು. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿದಂತೆ, ಅನೇಕ ಸಚಿವರು, ಶಾಸಕರು ಪಾಲ್ಗೊಂಡಿದ್ದರು.

<><><>

ಇಂದು ಮತ್ತು ನಾಳೆ, ಬಜೆಟ್ ಸಂಬಂಧಿ ಪ್ರಶ್ನೆಗಳಿಗೆ, ಮುಖ್ಯಮಂತ್ರಿಯವರು ಉತ್ತರ ನೀಡಲಿದ್ದು, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆ ಹಿನ್ನೆಲೆ, ವಿಧಾನಮಂಡಲ ಬಜೆಟ್ ಅಧಿವೇಶನವನ್ನು, 27ರ ಬದಲು, ನಾಳೆಯ ಕಲಾಪದ ಬಳಿಕ, ಅನಿರ್ಧಿಷ್ಟಾವಧಿ ಮುಂದೂಡುವ ಬಗ್ಗೆ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ನೇತೃತ್ವದಲ್ಲಿ, ಇಂದು ನಡೆಯಲಿರುವ, ಸದನ ಕಲಾಪ ಸಲಹಾ ಸಮಿತಿ ಸಭೆ, ನಿರ್ಣಯಿಸಲಿದೆ ಎಂದು, ವರದಿಗಳು ತಿಳಿಸಿವೆ.

<><><>

“ಹೌದು, ನಾವು ಕ್ಷಯ ರೋಗವನ್ನು ಕೊನೆಗಾಣಿಸಬಹುದು”, ಎಂಬ ಧ್ಯೇಯದೊಂದಿಗೆ, ಇಂದು, ವಿಶ್ವ ಕ್ಷಯ ರೋಗ ಜಾಗೃತಿ ದಿನಾಚರಣೆ. 2030ರ ವೇಳೆಗೆ, ಕೇಂದ್ರ ಸರ್ಕಾರ, ಸಂಪೂರ್ಣ ಕ್ಷಯ ಮುಕ್ತ ಭಾರತ ನಿರ್ಮಾಣದ ಗುರಿ ಹೊಂದಿದೆ.

<><><>

ವಿಜಯನಗರ ಜಿಲ್ಲೆ, ಕ್ಷಯ ರೋಗ ಪತ್ತೆಯಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನದಲ್ಲಿದೆ ಎಂದು, ವಿಜಯನಗರ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ, ಡಾಕ್ಟರ್ ಭಾಸ್ಕರ ತಿಳಿಸಿದ್ದಾರೆ.

<><><>

ಡಾಕ್ಟರ್ ಭಾಸ್ಕರ ಧ್ವನಿ 50 ಸೆಕೆಂದುಗಳು

ಹರ್ಷ/ಉಮೇಶ/ವಿವೇಕ/ಪಿಟಿಸಿ ವಿಜಯನಗರ (38)

<><><>

ವಿಶ್ವ ಕ್ಷಯರೋಗ ಜಾಗೃತಿ ದಿನಾಚರಣೆ ಕಾರ್ಯಕ್ರಮಕ್ಕೆ, ಕಲಬುರಗಿಯ, ಹಳೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಇಂದು ಬೆಳಗ್ಗೆ, ಚಾಲನೆ ನೀಡಿದರು.

<><><>

ಬೆಳಗಾವಿ ಜಿಲ್ಲೆ, ರಾಮದುರ್ಗದ, ಹೆಸರಾಂತ ಲೇಖಕ, ಹಸನ್ ನಯೀಂ ಸುರಕೋಡ, ಸಮಾಜವಾದಿಯಾಗಿ, ಅನೇಕ ಚಳವಳಿಗಳಲ್ಲಿ, ಅರ್ಪಣಾ ಭಾವದಿಂದ ದುಡಿದವರು ಎಂದು, ಪ್ರೊಫೆಸರ್ ಕಾಳೇಗೌಡ ನಾಗವಾರ, ಶ್ಲಾಘಿಸಿದ್ದಾರೆ. ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದ, ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ, ಭಾರತ ಯಾತ್ರಾ ಕೇಂದ್ರ, ಎಂ.ಪಿ. ಪ್ರಕಾಶ, ಸಮಾಜಮುಖಿ ಟ್ರಸ್ಟ್, ಮತ್ತು ಲೋಕನಾಯಕ ಜಯಪ್ರಕಾಶ ನಾರಾಯಣ, ವಿಚಾರ ವೇದಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಹಸನ್ ನಯೀಂ ಸುರಕೋಡ ಅವರಿಗೆ, ರಾಮ ಮನೋಹರ ಲೋಹಿಯಾ ಪ್ರಶಸ್ತಿ ಪ್ರದಾನಿಸಿ, ಅವರು ಗೌರವಿಸಿದರು.

<><><>

ಧಾರವಾಡದ, ಭಾರತೀಯ ತಂತ್ರಜ್ಞಾನ ಸಂಸ್ಥೆ, ಆವರಣದಲ್ಲಿ ನಿರ್ಮಾಣಗೊಂಡ, ಕೇಂದ್ರಿಯ ವಿದ್ಯಾಲಯವನ್ನು, ಐ.ಐ.ಟಿ. ನಿರ್ದೇಶಕ ವೆಂಕಪ್ಪಯ್ಯ ದೇಸಾಯಿ ಉದ್ಘಾಟಿಸಿದರು.

<><><>

ಎಸ್.ಎಸ್.ಎಲ್.ಸಿ. ಪರೀಕ್ಷೆ ಬಿಟ್ಟು, ಕೂಲಿ ಕೆಲಸಕ್ಕೆ ತೆರಳಿದ್ದ, ಗದಗ ಜಿಲ್ಲೆ, ಮುಂಡರಗಿ ತಾಲೂಕು, ಪೇಠಾಲೂರ ಗ್ರಾಮದ ಬಾಲಕಿಯನ್ನು, ದ್ರಾಕ್ಷಿ ತೋಟದಿಂದ ಕರೆ ತಂದು, ಕ್ಷೇತ್ರ ಶಿಕ್ಷಣಾಧಿಕಾರಿ, ಗಂಗಾಧರ ಅಣ್ಣಿಗೇರಿ, ವಿಜ್ಞಾನ ವಿಷಯದ ಪರೀಕ್ಷೆ ಬರೆಸಿದ್ದಾರೆ.

<><><>

ಬೀದರ ತೋಟಗಾರಿಕೆ ಮಹಾವಿದ್ಯಾಲಯ, ಚಟ್ನಳ್ಳಿ ಗ್ರಾಮದಲ್ಲಿ ಆಯೋಜಿಸಿದ, 84 ದಿನಗಳ ಗ್ರಾಮೀಣ ತೋಟಗಾರಿಕೆ, ಕಾರ್ಯಾನುಭವ ಶಿಬಿರವನ್ನು, ಶಾಸಕ ಶೈಲೇಂದ್ರ ಬೆಲ್ದಾಳೆ ಉದ್ಘಾಟಿಸಿದರು.

<><><>

ಬೆಳಗಾವಿ ಜಿಲ್ಲೆಯ, ಗ್ರಾಮೀಣ ಪ್ರದೇಶಗಳಲ್ಲಿ, ಸಾವಿರದ ನಾಲ್ಕುನೂರ’ರಷ್ಟು, ಮ್ಯೂಲ್ ಖಾತೆ, ಅಮಾಯಕರ ಬ್ಯಾಂಕ್ ಖಾತೆಗಳ ದುರ್ಬಳಕೆ ಜಾಲ, ಪತ್ತೆಯಾಗಿದೆ ಎಂದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕೆ. ರಾಮರಾಜನ್ ತಿಳಿಸಿದ್ದಾರೆ. 3 ಪ್ರಕರಣಗಳ ಆರೋಪಿಗಳನ್ನು ಪತ್ತೆ ಹಚ್ಚಿ, ಪ್ರಕರಣ ದಾಖಲಿಸಲಾಗಿದೆ. ತನಿಖೆ ಪ್ರಗತಿಯಲ್ಲಿದೆ ಎಂದು, ತಿಳಿಸಿದ್ದಾರೆ.

<><><>

ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿಯ ಶ್ರೀ ಶಾರದಾ ಪೀಠದಲ್ಲಿ, ಶ್ರೀ ಭಾರತೀತೀರ್ಥ ಸ್ವಾಮೀಜಿಯವರ, 76ನೇ ವರ್ಧಂತಿ ಮಹೋತ್ಸವ, ಇಂದು ನಡೆಯಲಿದೆ. ತನ್ನಿಮಿತ್ತ ಕಳೆದ 19ನೇ ತಾರೀಖು ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಿದ್ದು, 30ರ ವರೆಗೆ ನಡೆಯಲಿವೆ.

<><><>

ನವ ಮಂಗಳೂರು ಬಂದರು ಪ್ರಾಧಿಕಾರ, ಅಖಿಲ ಭಾರತ, ಬೀಚ್ ವಾಲಿಬಾಲ್ ಪಂದ್ಯಾವಳಿಯನ್ನು, ಇಂದಿನಿಂದ ಮೂರು ದಿನಗಳ ಕಾಲ, ಆಯೋಜಿಸಿದೆ. ಇಂದು ಸಂಜೆ 5 ಗಂಟೆಗೆ, ನವ ಮಂಗಳೂರು ಬಂದರು ಪ್ರಾಧಿಕಾರದ ಉಪಾಧ್ಯಕ್ಷೆ, ಎಸ್. ಶಾಂತಿ, ಪಂದ್ಯಾವಳಿ ಉದ್ಘಾಟಿಸಲಿದ್ದಾರೆ.

<><><>

ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ, ಇದೇ 28ರ, ಐ.ಪಿ.ಎಲ್. ಸರಣಿ ಪಂದ್ಯಗಳ, ಉದ್ಘಾಟನಾ ಪಂದ್ಯಾಟಕ್ಕೆ, ಭರದ ಸಿದ್ಧತೆಗಳು ನಡೆದಿವೆ. ಕೇಂದ್ರ ವಿಭಾಗದ, ಉಪ ಪೊಲೀಸ್ ಆಯುಕ್ತ, ಎಂ. ಅಕ್ಷಯ ನೇತೃತ್ವದಲ್ಲಿ, ಪೊಲೀಸರು, ಭದ್ರತಾ ತಪಾಸಣೆ

ಕೈಗೊಂಡರು. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ವೆಂಕಟೇಶ ಪ್ರಸಾದ ಹಾಗೂ ಕೆ.ಎಸ್.ಸಿ.ಎ. ಕಾರ್ಯದರ್ಶಿ, ಸಂತೋಷ ಮೆನನ್, ಜೊತೆ ಸಮಾಲೋಚಿಸಿದರು.

<><><>

ರಾಜ್ಯ ಸರ್ಕಾರ, ಕೆಲ ಮುಂಜಾಗ್ರತಾ ಕ್ರಮ ಹಾಗೂ ಭದ್ರತಾ ವ್ಯವಸ್ಥೆ ಖಾತ್ರಿ ಪಡಿಸುವಂತೆ, ಷರತ್ತು ಬದ್ಧ ಅನುಮತಿ ನೀಡಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.